ಬರುವ ಮಾತನ್ನು ಆಡಿದ್ದಳು. ಈಗ ಹೀಗೆ...

ಅಖ್ತರ ಆಲೋಚಿಸಿದ. ಚಿನ್ಮಯ್ ಮತ್ತು ಶಿವಾನಿಯವರ ಯಾತ್ರೆಯಲ್ಲಿ ತಾನು ಯಾವುದೇ ರೀತಿಯ ಪಾಲುದಾರನಾಗಿರಲಿಲ್ಲ. ಆದರೂ ತನಗೆಂದೇ ಬರೆದ ಪತ್ರದಂತೆ ಕಾಣುವ ಈ ಸಾಮಾನ್ಯ ಪತ್ರದಲ್ಲಿ ಅಡಗಿರುವ ಪ್ರಶ್ನೆಗಳು ಅವನನ್ನು ಕಾಡಿದವು. ಪಾಲುದಾರಿಕೆ ಸಂಸ್ಥೆಯ ಹೆಸರು ಬ್ರಾಂಡಿನ ಜೊತೆಗೋ ಅಥವಾ ಅದನ್ನು ನಡೆಸುತ್ತಿದ್ದ ಜನರ ಜೊತೆಗಿನ ಖಾಸಗಿ ಪಾಲುದಾರಿಕೆಯೋ... ಹೊಸ ಮತ್ತು ಯುವ ತಂಡ ವ್ಯಾಪಾರವನ್ನು ಕೈಹಿಡಿದಿರುವ ಹಿನ್ನೆಲೆಯಲ್ಲಿ ಹಳೆಯ ಬೇರನ್ನು ಕಿತ್ತೊಗೆಯುವ ಕೆಲಸ ಮಾಡಿರಬಹುದೋ... ಕೆಲವೇ ತಿಂಗಳಲ್ಲಿ ಇಷ್ಟು ದೊಡ್ಡ ಬದಲಾವಣೆಯಾಗಬೇಕೆಂದರೆ ಸುಜಾತಾ–ಮುಕುಂದಸಾಗರರ ಜೀವನದಲ್ಲಿಯೇ ಒಂದು ಮೂಲಭೂತ ಬದಲಾವಣೆಯಾಗಿರಬೇಕು. ಅದೇನು?

ಈಗ ಚಿನ್ಮಯ್–ಶಿವಾನಿಯ ಅಂಚೆ ಬಂದಾಗ ಅವನು ಈ ಹೊಸ ಅಂತರ್ಮುಖತೆಯಿಂದ ಏನಾದರೂ ಕಳಕೊಂಡಿರಬಹುದೇನೋ ಅನ್ನುವ ಅನುಮಾನ ಕಾಡಿತು. ಸಾಮಾಜಿಕ ಜಾಲತಾಣದಲ್ಲಿದ್ದಿದ್ದರೆ – ಆಪ್ತಗೆಳೆಯರ, ಮತ್ತವರ ಗೆಳೆಯರ ಗೋಡೆಬರಹದಿಂದಾಗಿ ತನ್ನ ಗೆಳೆಯರ ಬಗ್ಗೆ (ಹಾಗೂ ಅನೇಕ ಬಾರಿ ಕಂಡೇ ಇರದ ಜಾಲತಾಣದ ಗೆಳೆಯರ ಬಗ್ಗೆ) ಬೇಕಿದ್ದರೂ–ಬೇಡದಿದ್ದರೂ ಹೆಚ್ಚಿನ ಮಾಹಿತಿ ಸಿಗುತ್ತಿತ್ತು. ಅದನ್ನು ಕಳಕೊಂಡಿದ್ದ ಅಖ್ತರ್ ಅದರಿಂದ ನಷ್ಟವೇನೂ ಆಗಿಲ್ಲವೆಂದು ಭಾವಿಸಿದ್ದ.

ಈಗ ಚಿನ್ಮಯ–ಶಿವಾನಿಯೆನ್ನುವವರಿಂದ ಬಂದ ಅಂಚೆಯನ್ನು ನೋಡಿ ಅವನ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸತೊಡಗಿದವು. ಕೆಲವೇ ತಿಂಗಳ ಹಿಂದೆ ಸುಜಾತಾ ಮುಕುಂದಸಾಗರ ಉರುಫ್ ಎಸ್ಸೆಮ್ಮೆಸ್ ಸಂಸ್ಥೆಯನ್ನು ತನ್ನ ಕಂಟ್ರೋಲಿನಲ್ಲಿಟ್ಟುಕೊಂಡಿದ್ದಳು. ಅವಳೇ ಅವನನ್ನು ಏರ್‌ಪೋರ್ಟಿನಲ್ಲಿ ಬೀಳ್ಕೊಟ್ಟಿದ್ದಳು.

ಅಖ್ತರನಿಗೆ ತಕ್ಷಣಕ್ಕೆ ಫೋನೆತ್ತಿ ಸುಜಾತಾಳ ಜೊತೆ ಮಾತನಾಡಬೇಕೆಂದು ಅನ್ನಿಸಿತು. ಅಥವಾ ಈಮೈಲಿನ ತಳಭಾಗದಲ್ಲಿ ಶಿವಾನಿ–ಚಿನ್ಮಯರ ಹೆಸರಿನ ಕೆಳಗೆ ಕೊಟ್ಟಿರುವ ವಾಟ್ಸ್‌ಆ್ಯಪ್, ಸ್ಕೈಪುಗಳ ಮೇಲೆ ಕರೆ ಮಾಡುವುದೋ ಎನ್ನುವ ತುಂಟ ಆಲೋಚನೆಯೂ ಬಂತಾದರೂ, ಆ ಕೆಲಸವನ್ನು ನಂತರ ಮಾಡಿದರಾಯಿತು ಎಂದುಕೊಂಡ.

ಕಳೆದ ಬಾರಿ ಸುಜಾತಾಳನ್ನು ಕಂಡಾಗ, ಅವನಿಗೆ ತಮ್ಮಿಬ್ಬರ ಜೀವನದೃಷ್ಟಿಯಲ್ಲಿ ಎಷ್ಟು ವ್ಯತ್ಯಾಸವಿದೆ ಎನ್ನುವುದು ಮನದಟ್ಟಾಗಿತ್ತು. ಸುಜಾತಾಳ ಜೀವನಶೈಲಿಗೂ ಅಖ್ತರನ ಜೀವನಶೈಲಿಗೂ ಅಜಗಜಾಂತರ ಅಂತರ. ಮುಂಬಯಿನ ಶ್ರೀಮಂತ ಸಮಾಜದಲ್ಲಿ ನಿಯಮಿತವಾಗಿ ಪಾರ್ಟಿ ಮಾಡಿಕೊಳ್ಳುವ ವೈನ್ ಅಂಡ್ ಚೀಸ್ ಗ್ಯಾಂಗ್ ಅನ್ನಿಸಿಕೊಳ್ಳಬಹುದಾದ ಸಮುದಾಯದೊಂದಿಗೆ ಬೆರೆತು ನಿಂತಿದ್ದ – ಆಧುನಿಕವಾಗಿ ದಿರಿಸು ಧರಿಸುತ್ತಿದ್ದ, ಐಷಾರಾಮದ ವ್ಯಾಖ್ಯಾನಕ್ಕೆ ಉದಾಹರಣೆಯಾಗಬಹುದಾದ ಸುಜಾತಾ ಉರುಫ್ ಎಸ್ಸೆಮ್ಮೆಸ್ ಒಂದು ಅಂಚಿನಲ್ಲಿ. ಅದಕ್ಕೆ ಪೂರ್ಣ ವಿರುದ್ಧ ದಿಕ್ಕಿನಲ್ಲಿ ಸಾಂಪ್ರದಾಯಿಕವಾಗಿ ವರ್ತಿಸುವ, ಸಾಂಪ್ರದಾಯಿಕವಾಗಿ ಕಾಣುವ, ಯಾವ ದುಶ್ಚಟಗಳೂ ಇಲ್ಲದ ಅಖ್ತರ ಹುಸೇನ. ಹೀಗಿದ್ದರೂ, ಅಖ್ತರನನ್ನು ಯಾವುದೇ ಪ್ರಶ್ನೆ ಕೇಳದೇ – ಅವನಿದ್ದ ರೀತಿಯನ್ನು ಒಪ್ಪಿ – ಪ್ರೀತಿ ವಿಶ್ವಾಸಗಳನ್ನು ನಿಷ್ಕಲ್ಮಶವಾಗಿ ನೀಡುತ್ತಾ, ಗೆಳೆತನವನ್ನು ಅತ್ಯಂತ ಸಹಜವಾಗಿ ನಿಭಾಯಿಸುತ್ತಿದ್ದವಳು ಸುಜಾತಾ. ತನ್ನ ಹತ್ತಿರದ ಗೆಳೆಯ ಅನಿರುದ್ಧ ಹೆಚ್ಚು ಬದಲಾಗಿರಲಿಲ್ಲವಾದರೂ, ಅವನ ದಾರಿ ಭಿನ್ನವೆನ್ನಿಸಿತ್ತು. ಹಾಗೆಯೇ ಹೆಚ್ಚು ತಿಳಿಯದಿದ್ದ ಸುಜಾತಾ – ಬದಲಾಗಿ, ಸಾಂಪ್ರದಾಯಿಕತೆಯನ್ನು ಬಿಟ್ಟುಕೊಟ್ಟೂ ಆಧುನಿಕವಾದ ದಾರಿಯನ್ನು ಕ್ರಮಿಸುತ್ತಿದ್ದರೂ ಅಖ್ತರನಿಗೆ ಅವಳ ಜೊತೆಗಿನ ವ್ಯವಹಾರದಲ್ಲಿ ಒಂದು ಸರಳತೆ ಕಂಡಿತ್ತು.